
## ಕಳೆದ ಸಂಚಿಕೆಯಲ್ಲಿ

ದೇವಪ್ಪನ ಚಾದಂಗಡಿ ಜನಪ್ರಿಯತೆ ಕಳೆದುಕೊಳ್ಳುತ್ತಿದೆಯೇ? ಎಂದೂ ಜನಸಮೂಹದಿಂದ ತುಂಬಿರುತ್ತಿದ್ದ ಹೋಟೆಲ್ ಈಚೀಚೆಗೆ ತನ್ನ ಖಬರು ಕಳೆದುಕೊಳ್ಳಲಾರಂಭಿಸಿದ್ದೇಕೆ? ಊರಿಗೆ ಊರೇ ಭಣಗುಡಲಾರಂಭಿಸುತ್ತದೆ. ಮಂದಿ ಹೋಟೇಲ್‌ಗಾಗಿಯೇ ಬೇರೆ ಊರನ್ನು ಆಶ್ರಯಿಸಬೇಕಾಗುತ್ತದೆ. ಮಲ್ಲೂರಿನ ಬಸ್ಸು ಗಿಜಿಗುಡುವಂತೆಯೇ ಹೋಟೇಲು ಕೂಡ ಇದ್ದಂತಹ ಪರಿಸ್ಥಿತಿ ಬದಲಾಗಲು ಕಾರಣವೇನು? ಒಂದು ಸಲ ಊರವರೆಲ್ಲ ಕೂಡಿದಾಗ ತಮಗೆ ಅನುಕೂಲವಾಗುವ ಸ್ಥಳದಲ್ಲಿ ಯಾರಾದರೂ ಚಾದಂಗಡಿ ಸುರು ಮಾಡಿದರೆ ಒಳ್ಳೆಯದೆಂದು ದುಂಡಪ್ಪಕಾಕಾ ಸಲಹೆ ಕೊಡುತ್ತಾನೆ.



ಕೊಡಬ್ಯಾಡ.' ಆಮೇಲೆ ಅನಸೂಯೆಯ ಕಡೆ ತಿರುಗಿ ಅಂದ.

'ಅನಸವ್ವ, ನೀ ಹೀಂಗ ಮಾಡು. ಒಂದಿಷ್ಟು ದಿನ ತವರುಮನಿಯೊಳಗ ಇರು. ಅಂವನ ಮನಸ್ಸು ಎದಕ್ಕೋ ರಾಡಿ ಆಗೇತಿ. ಅದು ಸ್ವಲ್ಪ ತಿಳಿ ಆಗಲಿ. ಅದು ತಿಳಿ ಆಗಲಿಕ್ಕೆ ನಾವು ಟೈಮು ಕೊಡಬೇಕು. ಕೊಡೋಣಂತ. ಅಷ್ಟೂ ಮೀರಿ ಆಗಲಿಲ್ಲಂದ್ರ ಮುಂದೆ ನಿಮ್ಮ ಇಬ್ಬರಿಗೂ ಹೆಂಗ ತಿಳಿತೀತೋ, ಹಂಗ ಮಾಡುವಂತ್ರೆ. ಅಂವಗ ತಿಳಿದಂಗ ಅಂವ ಮಾಡ್ಲಿ. ನಿನಗ ತಿಳಿದಂಗ ನೀ ಮಾಡುವಂತೆ. ನಾವು ಹೊರಗಿನವರು ಏನ್ ಮಾಡಾಕ ಸಾಧ್ಯ ಐತಿ ಹೇಳ್ರಿ'. ತಾನು ಒತ್ತಾಯ ಮಾಡಿ ಅವಳನ್ನು ಕರೆದುಕೊಂಡು ಬರಲಿಲ್ಲವೆಂದು ಕಾಕಾನಿಗೆ ಸಿಟ್ಟು ಬಂದಿರಬೇಕು. ಒಂದು ತಿಂಗಳು ಆತ ಮಾತಾಡಿರಲಿಲ್ಲ. ಕಾಕಾ ತೂಗಿ ನೋಡಿಯೆ ಹೇಳುತ್ತಾನೆ, ಖರೆ. ಆದರೆ ರಾಜಿಯಾಗಲು ತನ್ನ ಮನಸ್ಸು ಅಡ್ಡ ಬರುತ್ತಿತ್ತು. ಅನಸೂಯೆಗೆ ಪಾಠ ಕಲಿಸಿಯೆ ಕಲಿಸುವುದು! ಆಕೆಗಿಂತ ಸುಂದರವಾಗಿರುವ ಚೆಲುವೆಯನ್ನು ಮದುವೆಯಾಗಿ ತೋರಿಸುತ್ತೇನೆ! ಅದಕ್ಕೆ ತಪಸ್ಸು ಬೇಕಾದರೆ ಮಾಡುತ್ತೇನೆ! 'ನೀನೆಷ್ಟು ಸುಂದರ ಇದ್ದೀ ಅಂತ ಕನ್ನಡಿಯೊಳಗ ನಿನ್ನ ಮುಖ ನೋಡಿಕೊ ಹೋಗು.' ಒಂದು ದಿನ ಆಕೆ ಕನಸಿನಲ್ಲಿ ಹೇಳಿದಂತಾಯಿತು!

ಶಿವಣ್ಣನ ಹೆಜ್ಜೆ ಸಪ್ಪಳ ರಾತ್ರಿಯ ನಿಶ್ಶಬ್ದದಲ್ಲಿ ಎಷ್ಟು ಸ್ಪಷ್ಟವಾಗಿ ಕೇಳುತ್ತಿವೆ. ಅವನು ಬಂದು ಗಳಗಳ ನೀರು ಕುಡಿದ. ದೇವಣ್ಣನೂ ಎದ್ದು ಹೊರಗೆ ಬಂದ. 'ಯಾಕ್ರೀ ದೇವಣ್ಣಾರೆ, ನಿದ್ದಿ ಬರಲಿಲ್ಲ?' ದೇವಣ್ಣ ಹೂಂ ಎಂದಷ್ಟೇ ಹೇಳಿ ಅವನಿಂದ ಎಲೆಯಡಿಕೆ ಇಸಿದುಕೊಂಡು ಹಾಕಿಕೊಂಡ. ಅವನ ಮನಸ್ಸು ತುಸು ಹಗುರವಾಯಿತು. ಹೊಯ್ದಾಡುತ್ತಿದ್ದ ಅನಿಶ್ಚತತೆಯ ಲೋಲಕ ಸ್ಥಿರವಾಯಿತು. ರಾತ್ರಿಯನ್ನು ಒಂದು ಸಲ ದೀರ್ಘವಾಗಿ ಕಣ್ತುಂಬಿಕೊಂಡ. ಮೊದಲಿನ ದೇವಣ್ಣ ಆಗಿಯೇ ತೀರಬೇಕೆಂಬ ಅವನ ನಿರ್ಧಾರ ಮತ್ತಷ್ಟು ಬಲಗೊಂಡಿತು. ಅದು ದುಡಿಯದೆ ಆಗುವಂತಹದಲ್ಲ. ಹೊಟೇಲನ್ನು ಹಿಂದಿನದಕ್ಕಿಂತ ಹತ್ತು ಪಟ್ಟು ಉತ್ತಮ ಮಾಡಬೇಕು. ಜನರಿಗೆ ಬೇಕಾದ್ದು ಬ್ಯಾಡಾದ್ದು ಮಾಡಬೇಕು. ಉಲ್ಲಾಸಗೊಂಡ ಒಳಗಿನ ಚೈತನ್ಯ ಎದ್ದು ಕುಳಿತಿತು. ತಾನು ಬಣ್ಣಗೆಡಬಾರದು ತನ್ನ ಚೇತನ ನಾಶವಾಗಿ ಹೋಗಲ ಆಸ್ಪದ ಕೊಡಬಾರದು. ಬದುಕನ್ನು ಬರಸೆಳೆದು ಅಪ್ಪಿಕೊಳ್ಳಲು ಕಲಿಯಬೇಕು. ತಾನೇಕೆ ಹೀಗೆ ಜೀವನದಲ್ಲಿ ಎಲ್ಲ ಮುಗಿದಂತೆ ಆಡುತ್ತಿದ್ದೇನೆ. ಎಲ್ಲ ಮುಚ್ಚಿಹೋಗುವ ಮಾತಾಡುತ್ತಿದ್ದೇನೆ. ತನಗೆ ಯಾರಾದರೂ ಬೆಂಬಲಕ್ಕೆ ಬೇಕು. ಕಾಕಾನೊಂದಿಗೆ ಅವ್ವ ಕೂಡ ತನಗೆ ಜೊತೆಯಾಗಿ ನಿಂತಳು. ಅವ್ವ ಪದೇಪದೇ ಹೇಳುತ್ತಿದ್ದಳು. 'ಅಲ್ಲೊ ದ್ಯಾವಣ್ಣ, ನೀನು ಚಿಂತಿ ಮಾಡಬ್ಯಾಡ. ಅನಸವ್ವ ಹೋಗ್ಯಾಳಲ್ಲ. ಹೋಗಲಿ. ಆಕೀ ಹೊಳ್ಳಿ ಬರ್ತೇನಂದ್ರೂ ಕರಕೋದು ಬ್ಯಾಡ. ನಿನಗ ಈಗಲೆ ಹೇಳೇನಿ, ನೆನಪಿಡು. ಆಮ್ಯಾಲ ಹೇಳಿಲ್ಲಾ ಅಂದಿ, ಕೇಳಿಲ್ಲಾ ಅಂದೀ. ಅನಸವ್ವನ ಘಮಿಂಡೆ ಬಾಳ ಆಗಿತ್ತು. ಇನ್ನೊಂದು ಮದುವೆ ಆಗೂವಂತೆ. ದುಂಡಪ್ಪಕಾಕಾಗ ನಾ ಹೇಳ್ತೇನಂತ. ಹುಡುಗಿಗೆ ವಯಸ್ಸಾಗಿದ್ರು ಪರವಾಯಿಲ್ಲ ಅಥವಾ ಸೋಡಚೀಟಿ ಮಾಡಿಕೊಂಡ ಯಾರಾದ್ರೂ ಇದ್ದೇ ಇರ್ತಾರ. ನೋಡು ಅಂತೇನಿ.' ಮಗನಿಗೆ ನಗು ಬಂದಿತು. ವಿಚ್ಛೇದಿತೆಯಾದವಳು ತನ್ನನ್ನು ಮತ್ತಷ್ಟು ಪರೀಕ್ಷಿಸುತ್ತಾಳೆ! ವಿವಾಹವಾಗುವುದು ಅಷ್ಟೊಂದು ಸರಳವೆ? ಈಗಂತೂ ಕಾಲ ಎಷ್ಟೊಂದು ಸಂಕೀರ್ಣವಾಗಿದೆ. ಇದೇ ಅನಸೂಯಳನ್ನು ಮದುವೆಯಾಗಬೇಕಾದಾಗ ತಾನು ಎದುರಿಸಿದ ಸಂಕಷ್ಟಗಳು ಒಂದೇ? ಎರಡೆ? ನೂರು ಬಸ್ಸು ಹತ್ತಿ ನೂರು ಬಸ್ಸು ಇಳಿದಿದ್ದೆವು.

ಹತ್ತು ಗುಡ್ಡ ಹತ್ತಿ ಹತ್ತು ಗುಡ್ಡ ಇಳಿದಿದ್ದೆವು. ಹದಿನೈದು ವರ್ಷಗಳ ಹಿಂದೆಯೆ ತನ್ನನ್ನು ಮದುವೆಯಾಗಲು ಹಿಂಜರಿದವರು ಈಗ ಹಿಂಜರಿಯದೆ ಇರುವರೆ? ಆದರೂ ಅವನಲ್ಲಿ ಸುಪ್ತವಾಗಿದ್ದ ಆಸೆ ಆಗಾಗ ಪುಟಿದೇಳುತ್ತಲೆ ಇತ್ತು. ಒಂಟಿಬಾಳು ಬೇಸರ ತರಿಸುತ್ತಿದೆ. ತನಗೇನು ವೈರಾಗ್ಯದ ವಯಸ್ಸೆ? ಪ್ರಯತ್ನವನ್ನೇಕೆ ಮಾಡಬಾರದು? ಛೇ! ಏನೇನೊ ವಿಚಾರ ಮಾಡುತ್ತಿದ್ದೇನೆ. ಚಾದಂಗಡಿ ಮತ್ತು ಮನೆ ಸ್ವಚ್ಛಗೊಳಿಸುವ ಕೆಲಸ ಬಿಟ್ಟು ಇಲ್ಲದ ವಿಚಾರಗಳತ್ತ ಮನಸ್ಸು ಹರಿಬಿಡುತ್ತಿದ್ದೇನೆ. ತನ್ನಲ್ಲಿ ಅಷ್ಟೊಂದು ವಿಷಯಾಸಕ್ತಿ ತುಂಬಿಕೊಂಡಿದೆಯೆ? ಅನಸೂಯೆ ಮತ್ತೆ ನೆನಪಾದಳು. ಬಿಟ್ಟು ಹೋಗು ಎಂದರೆ ಬಿಟ್ಟು ಹೋಗಿಬಿಡುವುದೆ? ಇದುವರೆಗೂ ಆಕೆ ತಿರುಗಿ ಹೇಳಿ ಕಳಿಸಿಲ್ಲ ಬೈಲಹೊಂಗಲಕ್ಕೆ ಸಂತೆಗೆ ಬಂದು ಹೋಗುತ್ತಾಳಂತೆ. ಒಂದಿಬ್ಬರಿಗೆ ಭೆಟ್ಟಿಯಾಗಿದ್ದಳಂತೆ. ಆದರೆ ಒಂದೇ ಒಂದು ಶಬ್ದವನ್ನು ತನ್ನ ಬಗ್ಗೆ ಆಡಲಿಲ್ಲ. ತನ್ನ ಬಗ್ಗೆ ಕೇಳಲಿಲ್ಲ. ತಾನೇನು ಆಕೆಗೆ ಅನಿವಾರ್ಯ ಅಲ್ಲ ಎನ್ನುವುದನ್ನು ಸಾಬೀತು ಮಾಡುತ್ತಿದ್ದಾಳೆ. 'ನೀನು ಗಂಡಸರ ಮರ್ಯಾದೆ ಹೋಗುವಂಗೆ ಮಾಡಿದೀ' ಎಂದು ಮೊನ್ನೆ ಊರವರೊಬ್ಬರು ಬೈದರು. ಆಕೆಯನ್ನು ಸಾಯಿಸಬೇಕಾಗಿತ್ತಂತೆ. ಹಾಗೆ ಹೇಳುವವರು ತನ್ನ ಕುಟುಂಬ ಹಾಳಾಗಿ ಹೋಗಲಿ, ತಾನು ಜೈಲು ಪಾಲಾಗಲಿ ಎನ್ನುವ ಆಸೆ ಹೊಂದಿರಬಹುದು! ಆಕೆ ದೂರಾಗಲು ತಾನೆ ಕಾರಣನೆ? ಆಕೆ ಅದನ್ನೆ ಹೇಳುತ್ತಿದ್ದಳಲ್ಲ'.

'ನಿನ್ನದು ಯಾವಾಗಲೂ ಹಾಸಿಗಿ ಪ್ರೀತಿ. ಅಷ್ಟೇ. ಮತ್ತೇನಿಲ್ಲ. ಮಲಗಿ ಎದ್ದ ಮ್ಯಾಲ ಕುಟುಂಬ ಬ್ಯಾಡವೇ ಬ್ಯಾಡ. ಆಮ್ಯಾಲ ಬರೀ ಹೊಟೇಲು, ದುಡ್ಡು, ಕಾಳುಕಡಿ. ಹೆಂಡತಿ ಉಂಡಾಳೇನು? ಆರಾಮ ಅದಾಳೇನು? ಮಕ್ಕಳು ಹೆಂಗ ಓದತಾ ಇದಾರೆ? ಇಂತಹದನ್ನ ಒಮ್ಮಿಯಾದ್ರೂ ಕೇಳೀದಿ?' ಅವಳ ಮಾತು ಬಾಣದಂತೆ ಎದೆಗೆ ನೆಟ್ಟಿತ್ತು. ಇತ್ತೀಚೆಗೆ ಆಕೆ ತನ್ನೊಂದಿಗೆ ಮಲಗುತ್ತಲೇ ಇರಲಿಲ್ಲ. ಮಕ್ಕಳನ್ನು ಕರೆದುಕೊಂಡು ಬೇರೆ ಕೋಣೆಯಲ್ಲಿ ಮಲಗಿಬಿಡುತ್ತಿದ್ದಳು. ತಾನು ಏನೆ ಸನ್ನೆ ಮಾಡಿದರೂ ಎಷ್ಟೇ ಸಂಜ್ಞೆ ಕೊಟ್ಟರೂ ಅದಕ್ಕೆ ಬೆಲೆಯಿರುತ್ತಿರಲಿಲ್ಲ. ತನ್ನೊಂದಿಗೆ ಅನಾಸಕ್ತಿ ತೋರುತ್ತಿದ್ದವಳು ಕಂಡಕ್ಟರನ ಜೊತೆ ಅಷ್ಟೇಕೆ ಆಸಕ್ತಿಯಿಂದ ಮಾತಾಡುತ್ತಿದ್ದಳು? ಅವರಿಬ್ಬರಿಗೂ ಸಂಬಂಧ ಇತ್ತೆ? ಯಾಕೆ ಅವನನ್ನು ಅಷ್ಟು ಹಚ್ಚಿಕೊಂಡಳು? ದುಂಡಪ್ಪಕಾಕಾ ಎಲ್ಲವನ್ನೂ ಸಾರಿಸಿಬಿಡುತ್ತಿದ್ದ.

'ಅಲ್ಲೋ, ದ್ಯಾವಣ್ಣ, ಸ್ವಲ್ಪ ಹೊತ್ತು ನಿಂತ ಮಾತಾಡಿದ್ರ, ಏನಾದ್ರು ಸಾಮಾನು ತಂದುಕೊಟ್ರ ಅವರೊಂದಿಗೆ ಸಂಬಂಧ ಕಲ್ಪಿಸತಿ ಅಂದ್ರ ನಿನಗ ಏನು ಹೇಳಬೇಕಪಾ? ತಲಿಯೊಳಗ ಗೊಬ್ಬರ ತುಂಬಿಕೊಂಡಿಯೇನು? ನೀನೂ ಹೊರಗಡೆ ರಗಡ ಹೆಂಗಸರ ಜೋಡಿ ಮಾತಾಡ್ತಾ ನಿಂತಿರ್ತಿ. ಅವರ ಜೋಡಿ ನಿನ್ನ ಸಂಬಂಧ ಐತಿ ಅಂತ ಅನಸವ್ವ ಹೇಳಿದ್ರ ಹೆಂಗ ಇರ್ತದ?'

ದುಂಡಪ್ಪಕಾಕಾ ತನಗೆ ಯಾವಾಗಲೂ ತೊಡರುಗಾಲು! ಅವನನ್ನು ಬಿಡುವಂತೆಯೂ ಇಲ್ಲ, ಹಿಡಿಯುವಂತೆಯೂ ಇಲ್ಲ. ಅವನಿಗೆ ಬಹಳ ಸ್ವಾತಂತ್ರ್ಯ ಕೊಟ್ಟೆ. ಅದಕ್ಕಾಗಿಯೆ ಏನೊ ತನ್ನನ್ನು ಗುಲಾಮನ ರೀತಿ ನಡೆಸಿಕೊಳ್ಳುತ್ತಾನೆ. (ಸಶೇಷ)

